<u>ಸಾಕ್ಷಿಯನ್ನು ದಿನಾಂಕ **07-01-2022** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಶ್ರೀ ವಿ ಎನ್ ಪಿ ವಕೀಲರಿಂದ ವಾದಿಯ ಪರವಾಗಿ ಃ</u>

ಡಾ. ಬಿ. ಆರ್. ಅಂಬೇಡ್ಕರ್ ಸಂಘದ ಅಧ್ಯಕ್ಷರು ನೀಡಿರುವ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ ನಿಪಿ-5, ಸದರಿಯವರು ನೀಡಿರುವ ಆಮಂತ್ರಣ ಪತ್ರವನ್ನು ನಿಪಿ-6, ಖಾತೆ ವರ್ಗಾವಣೆಯ ಆದೇಶ ಪತ್ರವನ್ನು ನಿಪಿ-7, ಕರ್ನಾಟಕ ಕೊಳಚೆ ನಿರ್ಮೂಲನೆ ಮಂಡಳಿಯವರು ನೀಡಿರುವ ರಶೀದಿಯನ್ನು ನಿಪಿ-8, ಗಂಗಾವತಿ ತಾಲೂಕು ಹರಿಜನ ಗಿರಿಜನ ಗೃಹ ನಿರ್ಮಾಣ ಸಹಕಾರ ಸಂಘದವರು ನೀಡಿರುವ ದಾಖಲೆಯನ್ನು ನಿಪಿ-9, ಸದರಿ ದಾಖಲೆಯ ಹಿಂಬದಿ ಒಂದು ರಶೀದಿಯನ್ನು ಅಂಟಿಸಿದ್ದು ಅದನ್ನು ನಿಪಿ-9(ಎ), ಬಾಡಿಗೆ ಕರಾರು ಪತ್ರವನ್ನು ನಿಪಿ-10, ಓ ಎಸ್ 128/2016 ದಾವೆಯ ಅರ್ಡರ್ ಶೀಟ್, ವಾದ ಪತ್ರ ಮತ್ತು ಐ. ಎ. ನಂಃ **03** ಮತ್ತು ಅದರ ಮೇಲೆ ಆದ ಆದೇಶ ದ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 11 ರಿಂದ ನಿಪಿ-14, ಅದೇ ರೀತಿ ಆ ದಾವೆಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ (ಅಂಡರ್ ಆರ್ಡರ್ 13 ರೂಲ್ 9) ರ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 15, ಅದೇ ರೀತಿ ಓ ಎಸ್ 251 ದಾವೆಯ ಆರ್ಡರ್ ಶೀಟಿನ ದೃಡೀಕೃತ ನಕಲು, ವಾದ ಪತ್ರ, ಮಧ್ಯಂತರ ಅರ್ಜಿ ಹಾಗೂ ಸದರಿ ಅರ್ಜಿಗೆ ಪ್ರತಿವಾದಿ ಸಲ್ಲಿಸಿದ ತಕರಾರು ಹಾಗೂ ಆ ಅರ್ಜಿಯ ಮೇಲೆ ಆದ ಆದೇಶದ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 16 ರಿಂದ ನಿಪಿ-20, ಸದರಿ ದಾವೆಯಲ್ಲಿ ಸಲ್ಲಿಸಿದ ಐ. ಎ. ನಂಃ 3 ಮತ್ತು 4 ಹಾಗೂ ಅವುಗಳಿಗೆ ಸಲ್ಲಿಸಿದ ತಕರಾರುಗಳ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 2 ರಿಂದ ನಿಪಿ-24, ಒಟ್ಟು 2 ಶೇರ್ ಸರ್ಟಿಫಿಕೇಟುಗಳನ್ನು ನಿಪಿ-25 ಮತ್ತು ನಿಪಿ-26, ಒಂದು ರಶೀದಿಯ ಕಾರ್ಬನ್ ಪ್ರತಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-27, ಪರಿಪತ್ರವನ್ನು ನಿಪಿ-28, ನಿವೇಶನ ಹಕ್ಕು ಪತ್ರವನ್ನು ನಿಪಿ-29, ಅದಕ್ಕೆ ಲ್ಯಾಮಿನೇಟ್ ಮಾಡಿರುವ ರಶೀದಿಯನ್ನು ನಿಪಿ-29(ಎ), ಟೌನ್ ಮುನಿಸಿಪಾಲಿಟಿ, ಗಂಗಾವತಿಯವರು ನೀಡಿರುವ ದಾಖಲೆ ದಿಃ 25.11.1987 ಹಾಜರುಪಡಿಸಿದ್ದು ಅದನ್ನು ನಿಪಿ-30,

ಒಟ್ಟು 3 ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-31 ರಿಂದ ನಿಪಿ-33, ಡಿಮಾಂಡ್ ರಿಜಿಸ್ಟರ್ ಎಕ್ಸ್ ಟ್ರ್ಯಾಕ್ಟ್ ಅನ್ನು ನಿಪಿ-34, ಪುರಸಭೆ ಕಾರ್ಯಾಲಯ, ಗಂಗಾವತಿ ಇವರು ನೀಡಿರುವ ದಾಖಲೆಯನ್ನು ನಿಪಿ-35, ನಿವೇಶನ ಹಕ್ಕುಪತ್ರವನ್ನು ನಿಪಿ-36, ಭಾರತೀಯ ನಿಮ್ನ ವರ್ಗದ ಸಂಸ್ಥೆಯವರು ನೀಡಿರುವ ದಾಖಲೆಯನ್ನು ನಿಪಿ-37, ಟಿ. ಎಂ. ಸಿ. , ಗಂಗಾವತಿ ಯವರು ನೀಡಿರುವ ಎನ್. ಓ. ಸಿ. ಹಾಗೂ ಖಾತೆ ವರ್ಗಾವಣೆ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-38 ಮತ್ತು ನಿಪಿ-39, ಅದಕ್ಕೆ ಲ್ಯಾಮಿನೇಟ್ ಮಾಡಿರುವ ಬೇಬಾಕಿ ಪ್ರಮಾಣಪತ್ರವನ್ನು ನಿಪಿ-40, ದೊಡ್ಡಬಸಪ್ಪ ಅವರ ಮರಣಪತ್ರವನ್ನು ನಿಪಿ-41, ಒಂದು ರಶೀದಿಯನ್ನು ನಿಪಿ-42, ನೋಟೀಸು ನಿಪಿ-43, ಒಂದು ಕರಾರುಪತ್ರವನ್ನು ನಿಪಿ-44, ಪುರಸಭೆ, ಗಂಗಾವತಿ ಇವರು ನೀಡಿರುವ 3 ಸ್ಕೆಚ್ಚುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-45 ರಿಂದ ನಿಪಿ-47, ಗಂಗಾವತಿ ನಗರಸಭೆಯವರು ನೀಡಿರುವ ಒಟ್ಟು 10 ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಿಗೆ ನಿಪಿ-48, ಒಟ್ಟು 23 ಎಲೆಕ್ಟ್ರಿಕ್ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಿಗೆ ನಿಪಿ-49, ಅದೇ ರೀತಿ ಸದರಿ ಪುರಸಭೆ, ಗಂಗಾವತಿಯವರು ನೀಡಿರುವ ಅಪ್ರೂಡ್ ಪ್ಲ್ಯಾನ್ ಅನ್ನು ನಿಪಿ-50, ಬಿಲ್ಡಿಂಗ್ ಪರ್ಮಿಟ್ ಅನ್ನು ನಿಪಿ-51, ಒಂದು ರಶೀದಿಯನ್ನು ನಿಪಿ-52, ಒಟ್ಟು 2 ಸರ್ವೀಸ್ ಸರ್ಟಿಫಿಕೇಟುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-53 ಮತ್ತು ನಿಪಿ-54 ಎಂದು ಗುರುತಿಸಲಾಯಿತು. ಒಟ್ಟು 5 ರೂಮ್ ಬಾಡಿಗೆ ಕರಾರುಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-55 ರಿಂದ ನಿಪಿ-59 ಎಂದು ಎದುರುದಾರರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ನಗರಸಭೆಯವರು ನೀಡಿರುವ ವಿಶೇಷ ತಿಳುವತಿಕೆಯನ್ನು ನಿಪಿ-60, ದಿಃ 31.05.2016, ದಿಃ 27.06.2016, 04.07.2016 ರಂದು ನೀಡಿರುವ ನೋಟೀಸುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-61 ರಿಂದ ನಿಪಿ-63, ಮಾನ್ಯ ಪೌರಾಯುಕ್ತರು ಅವರಿಗೆ ನಾನು ನೀಡಿರುವ ಮನವಿಯ ಸ್ವೀಕೃತ ನಕಲನ್ನು ನಿಪಿ-64, ರಶೀದಿಯನ್ನು ನಿಪಿ-65, ಒಟ್ಟು 2 ಪೋಸ್ಟಲ್ ರಶೀದಿಗಳನ್ನು ಒಟ್ಟಿಗೆ ನಿಪಿ-66, ಜಿಲ್ಲಾಧಿಕಾರಿ, ಕೊಪ್ಪಳ ಇವರಿಗೆ ನೀಡಿರುವ ಮನವಿಯ ಸ್ವೀಕೃತ ಪತ್ರವನ್ನು ನಿಪಿ-67, ನಗರ ಸಭೆ, ಗಂಗಾವತಿಯವರು ನೀಡಿರುವ ಹಿಂಬರಹವನ್ನು ನಿಪಿ-68, ಪೌರಾಯುಕ್ತರು, ನಗರಸಭೆ ಇವರಿಗೆ ನೀಡಿರುವ ಅರ್ಜಿಯ ಸ್ವೀಕೃತ ನಕಲನ್ನು ನಿಪಿ-69, ಖಾತೆ ರದ್ದು ಆದೇಶ ವನ್ನು ನಿಪಿ-70, ಒಟ್ಟು 2 ದಿನಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-71 ಮತ್ತು ನಿಪಿ-72, ನಗರ ಸಭೆ,

ಕಾರ್ಯಾಲಯ ಇವರು ನೀಡಿರುವ ನಮೂನೆ-3 ಅನ್ನು ನಿಪಿ-73, ಒಟ್ಟು 6 ಪೊಟೋಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-74 ರಿಂದ ನಿಪಿ-79, ಪೊಟೋ ತೆಗೆದವರು ನೀಡಿರುವ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಿಗೆ ನಿಪಿ-80, ಪೊಟೋಗಳ ಸಿ. ಡಿ. ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-81, ನಗರಸಭೆ, ಪೌರಾಯುಕ್ತರಿಗೆ ನೀಡಿರುವ ಮನವಿಯ ಸ್ವೀಕೃತ ಪ್ರತಿಯನ್ನು ನಿಪಿ-82, ಅವರು ನೀಡಿರುವ ಹಿಂಬರಹವನ್ನು ನಿಪಿ-83, ಪುರಸಭೆ ಕಾರ್ಯಾಲಯ ಸರ್ವಜನಿಕ ಮಾಹಿತಿ ಅಧಿಕಾರಿ (ಫೈಲ್ ಬೇಕರ್) ಇವರು ನೀಡಿರುವ ದಾಖಲೆಯ ಹಾಜರುಪಡಿಸಿದ್ದು ಅದನ್ನು ನಿಪಿ-84, ಸದರಿ ಕಾರ್ಯಾಲಯದವರು ನಡೆಸಿದ ಪ್ರಕರಣ ಸಂಖ್ಯೆಃ 322/87-88 ರ ಆರ್ಡರ್ ಶೀಟಿನ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 85, ಸದರಿ ನಗರಸಭೆಯವರು ನೀಡಿರುವ ದಾಖಲೆ ದಿಃ 25.11.1987 ಯನ್ನು ನಿಪಿ-86, ಒಟ್ಟು 4 ನೊಟೀಸುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-87 ರಿಂದ ನಿಪಿ-90 (ಸದರಿ ದಾಖಲೆಗಳನ್ನು ದೃಡೀಕರಣ ಮಾಡುವಾಗ ಒಂದೇ ಪುಟದ 2 ಬದಿಯಲ್ಲಿ ಮಾಡಿರುತ್ತಾರೆ), ಸಹಾಯಕ ನಿರ್ವಾಹಕ ಅಭಿಯಂತರರು, ಗಂಗಾವತಿ ಇವರಿಗೆ ನೀಡಿರುವ ಮನವಿಯ ಸ್ವೀಕೃತ ನಕಲನ್ನು ನಿಪಿ-91, ಸದರಿ ಕಛೇರಿಯವರು ನೀಡಿರುವ ಕಾರ್ಬನ್ ಪ್ರತಿ ದಾಖಲೆಯನ್ನು ನಿಪಿ-92, ಒಟ್ಟು 2 ತೆರಿಗೆ ಪಾವತಿ ಚಲನ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಿಗೆ ನಿಪಿ-93, ಸ್ವಯಂ ಆಸ್ತಿ ತೆರಿಗೆ ನಿರ್ಧರಣಾ ನಮೂನೆಯನ್ನು ನಿಪಿ-94, ಒಟ್ಟು 6 ಬಿಲ್ಲುಗಳನ್ನು ಅಂದರೆ ವಿದ್ಯುತ್ ಚ್ಛಕ್ತಿ ಹಾಗೂ ನಗರಸಭೆ, ಗಂಗಾವತಿಗೆ ಪಾವತಿ ಮಾಡಿದ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಿಗೆ ನಿಪಿ-95, ಕಟ್ಟಡ ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆಯನ್ನು ನಿಪಿ-96, ಗೆಜೆಟ್‌ಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಿಗೆ ನಿಪಿ- 97, ಓ ಎಸ್ 128/2016 ದಾವೆಯ ತೀರ್ಪು ಮತ್ತು ಡಿಕ್ರಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 98 ಮತ್ತು ನಿಪಿ-99, ಆ ದಾವೆಯ ವಾದ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 100, ನಮೂನೆ-3 ರ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 101 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಇನ್ನೂ ಕೆಲವು ದಾಖಲಾತಿಗಳನ್ನು ಹಾಜರುಪಡಿಸಲು ಕಾಲಾವಕಾಶವನ್ನು ಕೋರಿದ್ದು ಕಾಲಾವಕಾಶವನ್ನು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಗಂಗಾವತಿ.